# ವಿದ್ಯಾರ್ಥಿಗಳಿಗೆ ವಿವಾದ ಪರಿಹಾರ ಕೇಂದ್ರ

ಬೆಂಗಳೂರು: ವಿದ್ಯಾರ್ಥಿಗಳಿಗೆ ವಿವಾದ ಪರಿಹಾರ ಕ್ರಮಗಳನ್ನು ಉತ್ತೇಜಿಸುವ ಉದ್ದೇಶದಿಂದ ನಗರದ ಸಿಎಂಆರ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಲೀಗಲ್ ಸ್ಟಡೀಸ್ 'ವಿವಾದ ಪರಿಹಾರ ಕೇಂದ್ರ'ವನ್ನು ಸಂಸ್ಥೆಯ ಆವರಣದಲ್ಲಿ ತೆರೆದಿದೆ.

ಈ ಕೇಂದ್ರವು ವಿದ್ಯಾರ್ಥಿಗಳಿಗೆ ಲೋಕ ಅದಾಲತ್, ಮಧ್ಯಸ್ಥಿಕೆ, ರಾಜಿ ಸಂಧಾನಗಳ ಕುರಿತು ತರಬೇತಿ ನೀಡಲಿದೆ.

ಈ ಕೇಂದ್ರವನ್ನು ಆನ್‌ಲೈನ್ ಮೂಲಕ ಉದ್ಘಾಟಿಸಿ ಮಾತನಾಡಿದ ನ್ಯಾ.ಶಂಕರ ಗಣಪತಿ ಪಂಡಿತ್,' ಈ ಕೇಂದ್ರವನ್ನು ವಿದ್ಯಾರ್ಥಿ ಸಮಿತಿಗೆ ವಹಿಸಿರುವುದು ಉತ್ತಮ ಬೆಳವಣಿಗೆ. ಈ ಪ್ರಯತ್ನದಲ್ಲಿ ವಿದ್ಯಾರ್ಥಿಗಳಿಗೆ ಯಶಸ್ಸು ಸಿಗಲಿ' ಎಂದು ಶುಭಹಾರೈಸಿದರು.